# ನವಿಲುಗನ್ನಡಿ

- ಆಕರ್ಷಕ ಮುಖಪುಟ(ಕಲೆ: ಬಸವರಾಜಾಚಾರ್ ಕೆ.ಆರ್.)ದೊಂದಿಗೆ ಕೈಸೇರಿದ ಡಿಸೆಂಬರ್ ಸಂಚಿಕೆ ಅನನ್ಯ ಕತೆಗಳು, ವಿನೂತನ ಬರಹಗಳಿಂದ ಮನಸೆಳೆಯಿತು. ನೊಬೆಲ್ ಪುರಸ್ಕೃತ ಕವಯಿತ್ರಿ ಲೂಯಿಸ್ ಗ್ಲುಕ್ ಅವರ ಕುರಿತಾದ ಕಮಲಾಕರ ಕಡವೆ ಅವರ ಲೇಖನ ವಿಶಿಷ್ಟವಾಗಿದೆ.

  **ಪ್ರವೀಣ್‌ಕುಮಾರ್ ಜೆ.ಕೆ., ಮುಂಬೈ**

- ಜರ್ಮನಿಯ ಕನ್ನಡ ವಿದ್ವಾಂಸ ರೊಬೆರ್ಟ್ ಜೆಯ್ದೆನ್‌ಬೊಸ್ ಅವರೊಂದಿಗೆ ರಹಮತ್ ತರೀಕೆರೆ ಅವರು ನಡೆಸಿದ 'ಮಾತು–ಕತೆ' ಕುತೂಹಲಕರ ವಿಷಯಗಳನ್ನು ತಿಳಿಸಿತು. ಜರ್ಮನಿಯಲ್ಲಿ ಧಾರ್ಮಿಕ ಆಸಕ್ತಿಗಳು ಕಡಿಮೆ ಆಗುತ್ತಿದ್ದರೆ ಇಲ್ಲಿ ಎಲ್ಲದಕ್ಕೂ ಅದರ ಲೇಪ, ಅಲ್ಲಿ ನೂರು ವರ್ಷಗಳಲ್ಲಿ ಆದ ಮಹಾಯುದ್ಧಗಳ ಬಗ್ಗೆ ವಿಷಾದವಿದ್ದರೆ, ಇಲ್ಲಿ ಹೊಸ ಯುದ್ಧೋನ್ಮಾದ. ಉತ್ತರ ಧ್ರುವ, ದಕ್ಷಿಣ ಧ್ರುವ ಎಂದರೆ ಇದೇ ಇರಬೇಕು.

  **ರವಿ ಮುನವಳ್ಳಿ**

- ವಿಶ್ವ ಸಾಹಿತ್ಯ ವೇದಿಕೆಯಲ್ಲಿ ರಾರಾಜಿಸುವ ಎಲ್ಲಾ ಅರ್ಹತೆ ಇದ್ದರೂ ಪ್ರಚಾರ, ಸೂಕ್ತ ವ್ಯವಸ್ಥೆ ಇಲ್ಲದಿರುವ ಕಾರಣಕ್ಕೆ ಅರ್ಹ ಮಾನ್ಯತೆಯಿಂದ ಹೇಗೆ ಕನ್ನಡ ವಂಚಿತವಾಗಿದೆ ಎಂಬುದನ್ನು ಜೆಯ್ದೆನ್‌ಬೊಸ್ ಸೂಕ್ಷ್ಮವಾಗಿ ಹೇಳಿದ್ದಾರೆ.

  **ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಶ್ರೀಧರ ಬಳಗಾರ ಅವರ 'ಹಾತೆಗಳು' ನೀಳ್ಗತೆ ಹಳ್ಳಿ ಬದುಕಿನ ಮಣ್ಣಿನ ವಾಸನೆಯುಳ್ಳ ಭಾಷೆಯನ್ನು ಸಶಕ್ತವಾಗಿ ಕಟ್ಟಿಕೊಟ್ಟಿದೆ.

  **ಮಂಜುನಾಥ ನಾಯ್ಕ, ಯಲ್ವಡಿಕವೂರ**




- ಕಾವ್ಯಾ ಕಡಮೆ ಅವರ 'ಮಾಕೋನ ಏಕಾಂತ' ಕುತೂಹಲಕಾರಿಯಾದ ವಿಭಿನ್ನ ಕತೆ. ಟೋರಿಯೊಂದಿಗಿನ ಸಂಬಂಧವನ್ನು ಮೊದಲೇ ಪ್ರಸ್ತಾಪಿಸುವ ಬದಲು ಮಾಕೋ ತಾಯಿಯ ಮನಸ್ಸನ್ನು ಓದಿದ ಬಳಿಕ ಹೇಳುವಂತಿದ್ದರೆ ಕತೆಗೆ ಬೇರೊಂದು ಆಯಾಮ ಸಿಗುತ್ತಿತ್ತು.

  **ಭರತ್ ಬಿ.ಎನ್., ಬೆಂಗಳೂರು**

- 'ನಿಚ್ಚಂ ಪೊಸತು' ಮಾಲಿಕೆಯಲ್ಲಿ ಸಮಾನತೆಯ ಹರಿಕಾರ ಕವಿ ಹರಿಹರ ದೇವನ ಕಾವ್ಯದ ಅವಲೋಕನ (ನಿಮ್ಮ ಕರ್ಪಿಂಗೆನ್ನ ಶಿರ ಸರಿಯೇ– ಕೃಷ್ಣಮೂರ್ತಿ ಹನೂರು) ಅರ್ಥಪೂರ್ಣ. ಹಳಗನ್ನಡ ಪಾಠ ಮಾಡುವ ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಈ ಮಾಲಿಕೆ ದಾರಿದೀಪವಾಗಿದೆ.

  **ಚಿದಾನಂದ ಎಂ., ಧಾರವಾಡ**

- ನಟರಾಜ್ ಹುಳಿಯಾರ್ ಮತ್ತು ಎಸ್. ದಿವಾಕರ್ ಅವರು ಮೌಲಿಕ ಕೃತಿಗಳನ್ನು (ಬಸವರಾಜು ಮೇಗಲಕೇರಿ ಅವರ 'ನಮ್ಮ ಅರಸು' ಹಾಗೂ ನರೇಂದ್ರ ಪೈ ಅವರ 'ಕನಸುಗಳು ಖಾಸಗಿ') ಅರ್ಥಪೂರ್ಣವಾಗಿ ವಿಮರ್ಶಿಸಿದ್ದಾರೆ.

  **ಸಂಜೋತಾ ಶಂಕರ್, ಬೆಂಗಳೂರು**